ಶ್ರೀ ಎ. ಪಿ. ಅಪ್ಪಣ್ಣ.—ಅದೆರಲ್ಲಿ ನಮ್ಮ ಕರ್ತವ್ಯ ಇಷ್ಟೆ. ಯಾರು ಗಣಿಗಳನ್ನು ತೆಗೆದು ಕೊಂಡು ಸಾಧ್ಯವಾದಷ್ಟು ಪ್ರೊಡಕ್ಷನ್ ಮಾಡುತ್ತಾರೆಯೋ ಅಂಥವರ ಮಾಹಿತಿಯನ್ನು ಪಡೆದು ಕೊಂಡು ಲೀಜಿಗೆ ಕೊಡುತ್ತೇವೆ. ಅವರು ಯಾವ ರೀತಿ ಕೆಲಸಗಾರರನ್ನು ನೇಮಕ ಮಾಡಿಕೊಳ್ಳು ತ್ತಾರೆ ಎಷ್ಟು ಸಂಬಳವನ್ನು ಕೊಡುತ್ತಾರೆ ಎನ್ನತಕ್ಕ ವಿಚಾರ ನಮಗೆ ಸಂಬಂಧಪಟ್ಟದ್ದಲ್ಲ. ಅದು ಲೇಬರ್ ಇರಾಖೆಗೆ ಸಂಬಂಧಪಟ್ಟಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—148 ಜನಗಳ ಪೈಕಿ ಎಷ್ಟು ಜನ ಕಾಂಗ್ರೆಸ್ಸಿನವರು ಇದ್ದಾರೆ, ಮತ್ತು ಅವರಿಂದ ಬಾಕಿ ಬರಬೇಕಾದ್ದು ಎಷ್ಟಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಬಿ. ಗಂಗಣ್ಣ.—ಗಣಿ ಗುತ್ತಿಗೆದಾರರು ಮ್ಯಾಂಗನೀಸ್ ಗಣಿಯ ಮಾಲೀಕರ ಪಟ್ಟಿಗೆ ಒಳ ಪಡುತ್ತಾರೆಯೇ, ಐರನ್ ಪೋರನ್ನು ಗುತ್ತಿಗೆಯಮೇಲೆ ತೆಗೆದುಕೊಂಡು ಅನೇಕ ಜನ ಕೆಲಸ ಮಾಡು ತ್ತಿದ್ದಾರೆ. ಐರನ್ ಪೋರಿಗೆ ಮಾರ್ಕೆಟ್ ಚೆನ್ನಾಗಿರುವುದರಿಂದ ಅದಕ್ಕೆ ಅನುಕೂಲತೆಯನ್ನು ಮಾಡಿಕೊಡುವ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಐರನ್ ಪೋರಿನ ಗಣಿಗಳನ್ನು ತೆಗೆದುಕೊಂಡು ಯಾರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಅಂಥವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಂಡು ಅವರ ಲೈಸೆನ್ಸ್ ರದ್ದುಮಾಡಿ ಬೇರೆಯವರಿಗೆ ಕೊಡುತ್ತೇವೆ. ಕೆಲವು ಐರನ್ ಪೋರಿನಲ್ಲಿ ಕಂಟೆಂಟ್ಸ್ ಕಡಿಮೆ ಇದೆ. ಅಂಥಾ ಐರನ್ ಪೋರಿಗೆ ಮಾರ್ಕೆಟ್ ಅಷ್ಟು ಚೆನ್ನಾಗಿಲ್ಲವೆ ಇರುವುದರಿಂದ ಸ್ವಲ್ಪ ತೊಂದರೆ ಇದೆ. ಮ್ಯಾಂಗನೀಸ್ ಮಾರ್ಕೆಟ್ಟನ್ನು ಇಂಪ್ರೂವ್ ಮಾಡಬೇಕು, ಮತ್ತು ಅದನ್ನು ಫಾರಿನ್ ಮಾರ್ಕೆಟ್ಟಿಗೆ ಕಳುಹಿಸಬೇಕು ಎನ್ನುವ ದೃಷ್ಟಿಯಿಂದ ಕೇಂದ್ರಸರ್ಕಾರದವರು ಒಂದು ಸಮಿತಿಯನ್ನು ರಚನೆ ಮಾಡಿ ಅದನ್ನು ಹೇಗೆ ಇಂಪ್ರೂವ್ ಮಾಡಬೇಕೆಂಬ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಸಮಿತಿಯ ವರಿಗೆ ಆದೇಶವನ್ನು ನೀಡಿದ್ದಾರೆ. ಆ ಸಮಿತಿಯವರು ಈಗಾಗಲೇ ಪೈಸೂರಿಗೆ ಬಂದು ಗಣಿ ಮಾಲೀಕರನ್ನು ಭೇಟಿ ಮಾಡಿ ಅದನ್ನು ಯಾವ ರೀತಿ ಇಂಪ್ರೂವ್ ಮಾಡಬೇಕೆಂಬ ಬಗ್ಗೆ ಸಲಹೆಗಳನ್ನು ನಮ್ಮ ಸರ್ಕಾರದಿಂದ ಹೊಂದಿ ಹೋಗಿದೆ.

ಶ್ರೀ ಬಿ. ಭಾನ್ಕರಶೆಟ್ಟಿ.—ಸ್ವಾಮಿ, ಮಾನ್ಯ ಕಾಂಗ್ರೆಸ್ ಸದಸ್ಯರ ಪತ್ನಿಯೊಬ್ಬರು ಗಣಿ ಗುತ್ತಿಗೆಯನ್ನು ಪಡೆದಿದ್ದಾರೆ. ಅವರಿಂದ ಎಷ್ಟು ಬಾಕಿ ಬರಬೇಕು ?

ಶ್ರೀ ಎ. ಪಿ. ಅಪ್ಪಣ್ಣ.—ಗಣಿ ಕೆಲಸ ಮಾಡದೆ ಯಾವುದೇ ಪೋರು ತೆಗೆಯದೆ ಇರುವವರ ಲೆಕ ಇದೆ. ಪೋರ್ ತೆಗೆದು ರಾಯಲ್ಟಿಕೊಡದೇ ಇರುವವರ ಮಾಹಿತಿ ಈಗ ನನ್ನಲ್ಲಿ ಇಲ್ಲ.

## Furnishing of Travellers Bungalow at Bagalkot

272. Sri K. P. NADAGOUDA (Mudhol).—

Will the Minister for Public Works be pleased to state :—

the expenditure incurred by the Government over furnishing the Travellers Bungalow at Bagalkot on the eve of the visit of the Vice-President of India in 1967 ?

*A.*—Sri VEERENDRA PATIL (Minister for Public Works).—

Rs. 17,487.21 Paise.

ಶ್ರೀ ಕೆ. ಪಿ. ನಾಡಗೌಡ.—ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡ ಇಂಥಾ ಆಡಂಬರದ ಸೌಕರ್ಯವನ್ನು ಒದಗಿಸುವುದು ಪಿಹಿತವೇ ?

† ಶ್ರೀ ವೀರೇಂದ್ರ ಪಾಟೀಲ್.—ಅದು ಆಡಂಬರದ ಸೌಕರ್ಯವಲ್ಲ ; ಅವಶ್ಯ ಸೌಕರ್ಯ.

†Indicates that remarks or speeches have not been revised by the member concernedad

**Sri B. B. SAYANAK.**—May I know for how many days the Vice-President of India stayed at Bagalkot ?

**Sri VEERENDRA PATIL.**—He was there for one day.

ಶ್ರೀ ಪಿ. ತಮ್ಮಯ್ಯ.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ನಣ್ಣ ನಣ್ಣ ಪಟ್ಟಣಗಳಲ್ಲಿ ಇರುವ ಪ್ರವಾಸಿ ಮಂದಿರಗಳನ್ನು ಐ.ಬಿ.ಟಿ.ಬಿ ಎಂದು ಮಾಡಿದ್ದೀರಿ, ಯಾವಾಗಲೂ ಮಂತ್ರಿಗಳ ಪ್ರವಾಸ ನಡೆಯುತ್ತಿರುವುದರಿಂದ ಬೇರೆ ಜನಗಳಿಗೆ ಅನಾನುಕೂಲವಾಗಿದೆ. ಮತ್ತು ಆ ಪ್ರವಾಸ ಮಂದಿರಗಳಲ್ಲಿ ಆದಾಯ ಬೇರೆ ಬರುತ್ತಿದೆ. ಆದ್ದರಿಂದ ಆ ಪ್ರವಾಸ ಮಂದಿರಗಳಲ್ಲಿ 2-3 ರೂಮು ಹೆಚ್ಚಿಗೆ ಕಟ್ಟಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಎಲ್ಲೆಲ್ಲಿ ಆ ರೀತಿ ಅವಶ್ಯಕತೆ ಕಾಣುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಉಪರಾಷ್ಟ್ರಪತಿಯವರು ಒಂದು ದಿನ ಬಂದು ಇಲ್ಲಿ ಇದ್ದುದಕ್ಕೆ 17,487-21 ರೂಪಾಯಿಗಳನ್ನು ಖರ್ಚು ಮಾಡಬೇಕಾದರೆ ಯಾವ ರೀತಿ ನಜ್ಜು ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀರ್.—ಕೇವಲ ಉಪರಾಷ್ಟ್ರಪತಿಯವರು ಬರುತ್ತಾರೆಂದು ಮಾಡಿಸಲಲ್ಲ. ಇವರು ಬಂದು ಹೋದಮೇಲೆ ಸಂಗಮದಲ್ಲಿ ಬಸವಣ್ಣನವರ 8ನೇ ಶತಮಾನೋತ್ಸವ ನಡೆದಾಗ ಮೈಸೂರಿನ ಮಹಾರಾಜರು ಬಂದು ಇಲ್ಲಿ ತಂಗಿದ್ದರು. ಒಂದು ದಿನದ ಸಲುವಾಗಿ ಫರ್ನಿಚರ್‌ಗಳನ್ನು ಆ ಪ್ರವಾಸಿ ಮಂದಿರಕ್ಕೆ ಒದಗಿಸಲಲ್ಲ ಯಾರು ಹೋದರೂ ಉಪಯೋಗವಾಗಲೀ ಎಂದು ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಪ್ರವಾಸೀ ಮಂದಿರಕ್ಕೆ ಕೊಂಡಿರತಕ್ಕ ಫರ್ನಿಚರ್‌ಗಳನ್ನು ಸರ್ಕಾರದ ವತಿಯಿಂದ ನೇರವಾಗಿ ಕೊಂಡಿದ್ದೋ ಅಥವಾ ಟೆಂಡರ್ ಮೂಲಕ ಕೊಂಡಿದ್ದೋ ?

ಶ್ರೀ ವೀರೇಂದ್ರ ಪಾಟೀರ್.—ನಮ್ಮ ಲೋಕರ್ ಇಂಜನಿಯರ್ ಅವರು ಎಸ್ಟಿಮೇಟ್ ಮಾಡಿ ಕಳಿಸಿದ್ದರು, ಅದರ ಪ್ರಕಾರ ನಾವು ಹಣವನ್ನು ಮಂಜೂರು ಮಾಡಿದ್ದೇವೆ.

**Sri DIGAMBARA RAO B. KALMANKAR.**—Whether it is a fact that this large amount was not spent on furniture but it was swallowed by the local congressmen ?

**Sri VEERENDRA PATIL.**—No Sir. Not at all.

ಶ್ರೀ ಎಂ. ನಾಗಪ್ಪ.—ಒಂದು ಪ್ರವಾಸಿ ಮಂದಿರಕ್ಕಾಗಿ 17,487-21 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರ ಜೊತೆಗೆ ಪ್ರತಿ ತಾಲ್ಲೂಕ್‌ಗಳಲ್ಲೂ ಈಗ ಇರುವಂಥ ಪ್ರವಾಸಿ ಮಂದಿರಗಳ ಜೊತೆಗೆ ಇನ್ನೂ 3-4 ಹೆಚ್ಚು ಕಟ್ಟಿಸುತ್ತಿದ್ದೀರಿ. ಆದರೆ ಬೇರೆ ಕೆಲಸಗಳಿಗೆ ದುಡ್ಡು ಇಲ್ಲವೆಂದು ಹೇಳುತ್ತೀರಿ. ಈ ರೀತಿ ಖರ್ಚು ಮಾಡುವುದನ್ನು ನಿಲ್ಲಿಸಿ ಇನ್ನು ಮುಂದೆ ಅಗತ್ಯವಾಗಿ ಬೇಕಾದಂಥ ಸ್ಕೂಲ್ ಕಟ್ಟಡ ಮುಂತಾದವನ್ನು ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಏತಕ್ಕಾಗಿ ಖರ್ಚು ಮಾಡಿದ್ದೇವೆ ಎಂಬುದನ್ನು ಹೇಳಿದ್ದೇನೆ. 10 ರೂಮ್‌ಗಳಿಗೆ ಫರ್ನಿಚರ್‌ಗಳನ್ನು ಒದಗಿಸಲು 40 ಸಾವಿರ ರೂಪಾಯಿಗಳನ್ನು ಒದಗಿಸಬೇಕೆಂದು ಕೇಳಿದ್ದರು. ಆದರೆ ನಾವು ಹಣವಿಲ್ಲವೆಂದು 5 ರೂಮ್‌ಗಳಿಗೆ ಮಾತ್ರ 17 ಸಾವಿರ ಚಿಲ್ಲರೆ ಹಣವನ್ನು ಒದಗಿಸಿದ್ದೇವೆ.

ಶ್ರೀ ಜಿ. ಎನ್. ಪಾಟೀರ್.—ಬಾಗಲಕೊಟೆಯು ಬಿಜಾಪುರಕ್ಕೆ ಹೋಗುವ ದಾರಿಯಲ್ಲಿರುವುದರಿಂದ ಮತ್ತು ಮಂತ್ರಿಗಳು ಆಗಾಗ್ಗೆ ಬಾಗಲಕೋಟೆಗೆ ಭೇಟಿ ಕೊಡುತ್ತಿರುವುದರಿಂದ, ಇಲ್ಲಿಯ ಪ್ರವಾಸಿ ಮಂದಿರ ಎಲ್ಲಾ ರೀತಿಯಿಂದಲೂ ಅನುಕೂಲವಾಗಿರುತ್ತದೆ ; ಸಜ್ಜಾಗಿರುತ್ತದೆಂದು ನಾವುಗಳು ಕಲ್ಪನೆ ಮಾಡಿಕೊಂಡಿದ್ದೆವು. ಆದರೂ ಸಹ ಇಷ್ಟು ಹಣವನ್ನು ಖರ್ಚು ಮಾಡಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀರ್.—ಮಾನ್ಯ ಸದಸ್ಯರು ಮಂತ್ರಿಗಳು ಹೋಗುತ್ತಿದ್ದರೆ ಪ್ರವಾಸಿ ಮಂದಿರಗಳು ಚೆನ್ನಾಗಿರುತ್ತವೆಂದು ತಿಳಿದುಕೊಂಡಿದ್ದಾರೆ. ಅದರಲ್ಲಿ ಅರ್ಥವಿಲ್ಲ. ಬಾಗಲಕೋಟೆ ತಾಲ್ಲೂಕ್ ಹೆಡ್‌ಕ್ವಾರ್ಟರ್ ಮತ್ತು ದೊಡ್ಡ ಪಟ್ಟಣವೂ ಹೌದು. ಇಲ್ಲಿಗೆ ಆಗಾಗ್ಗೆ ವಿ.ಐ.ಪಿ. ಗಳು ಬರುತ್ತಿರುತ್ತಾರೆ. ಮಳೆಗಾಲದಲ್ಲಿ ಬಾಗಲಕೊಟೆಯಿಂದ ಬಿಜಾಪುರಕ್ಕೆ ಹೋಗಲು ತೊಂದರೆ

ಯಾಗುವುದರಿಂದ ಕೃಷ್ಣಾ ನದಿಗೆ ಒಂದು ಸೇತುವೆಯನ್ನು ಹಾಕಿಸಬೇಕೆಂದು ಅಲ್ಲಿಯವರೆಗೆ ಪ್ರವಾಸಿ ಮಂದಿರವನ್ನು ದೊಡ್ಡದು ಮಾಡಬೇಕೆಂದು ಮಾನ್ಯ ಸದಸ್ಯರೇ ಕೇಳಿದ್ದಾರೆ. ಇಲ್ಲ ಅನೇಕ ಕಾಲೇಜು ಗಳು ಮತ್ತು ಇಂಜನಿಯರಿಂಗ್ ಕಾಲೇಜು ಸ್ಥಾಪನೆಯಾಗಿವೆ. ಸಿಮೆಂಟ್ ಕಾರ್ಖಾನೆ ಇದೆ. ಇಷ್ಟರಲ್ಲಿ ಸ್ಪಿನ್ನಿಂಗ್ ಮಿಲ್ ಬರುವುದರಲ್ಲಿದೆ. ಇಲ್ಲಿಯ ಪ್ರವಾಸೀ ಮಂದಿರಕ್ಕೆ ಬಂದು ಹೋಗುವ ಜನರು ಬಹಳ ಜಾಸ್ತಿಯಿರುವುದರಿಂದ ಇಷ್ಟು ಹಣ ಖರ್ಚು ಮಾಡಬೇಕಾಯಿತು. ಹೊರಗಿನಿಂದ ಬರತಕ್ಕ ದೊಡ್ಡ ಮನುಷ್ಯರಿಗೆ ನಾವು ಏನು ಒಂದು ಗೌರವ ಸಲ್ಲಿಸಬೇಕೋ ಅದನ್ನು ಸಲ್ಲಿಸಬೇಕಾ ಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ದಿನ ಉಪರಾಷ್ಟ್ರಪತಿಯವರು ಭೇಟಿಕೊಟ್ಟಿದ್ದಕ್ಕೆ ಇಷ್ಟು ಹಣ ಖರ್ಚು ಮಾಡಿದ್ದೀರಿ. ಇಂತಹವರು ಮತ್ತು ನಿಮ್ಮಂತಹ ಮಂತ್ರಿಗಳು ಯಾವ ಯಾವ ಭಾಗ ಗಳಿಗೆ ಭೇಟಿ ಕೊಡುತ್ತಾರೋ ಆ ಭಾಗದ ರಸ್ತೆಗಳು ಮತ್ತು ಪ್ರವಾಸಿ ಮಂದಿರಗಳು ದುರಸ್ತಿ ಯಾಗುತ್ತವೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಪ್ರತಿ ತಿಂಗಳು ದೊಡ್ಡ ದೊಡ್ಡ ವ್ಯಕ್ತಿಗಳನ್ನು ಕರೆಸಿ ರಸ್ತೆಗಳು ದುರಸ್ತಿಯಾಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಯಾರಾನ್ನಾದರೂ ಕರೆಸಿದರೆ ಮುಂದಿನ ಕೆಲಸವನ್ನು ನಾನು ಮಾಡುತ್ತೇನೆ.

**Sri H. SIDDAVEERAPPA.**—Is it an item of luxury or necessity ?

**Sri VEERENDRA PATIL.**—I said Sir, that this is an old T. B. There are ten suites and they were not well-furnished. That is why we have furnished it at a cost of 17,000. I already said that it was a necessity.

**Sri H. SIDDAVEERAPPA.**—If this is the conception of necessity in the matter of furnishing the T. B., is it the opinion of the Government that it is necessary to furnish all the T.B.s in the State with such costly material ?

**Sri VEERENDRA PATIL.**—I have said that we have furnished it with the necessary material and we have spent Rs. 17,000 because V.I.Ps. and the Maharaja of Mysore were visiting that place. So we thought that the VIPs visit the place, whatever respect is due to them, we have to give it by prividing certain facilities, to which they were accustomed.

**Sri B. P. GANGADHAR.**—Is it not a fact that spending Rs. 17,000 for the residence of the Vice-President for one day is an extravagant expenditure considering the standards of the so-called Gandhiraj especially in Mysore State ?

**Sri VEERENDRA PATIL.**—I have already stated that for a number of days we did not furnish that T.B. Since it was not well-furnished, we had to furnish it.

**Sri H. SIDDAVEERAPPA.**—I can tell the Government that in one T.B., they spent Rs. 80,000 for the stay of the Prime Minister for a few hours. That T.B. is always locked. They won't use it at all except when the Ministers go there.

**Mr. DEPUTY SPEAKER.**—Next question No. 69.